# ಅಕ್ಕಾ ನಂದಗೋಪನ ಅರಮನೆಯ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page no. 111
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 19
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page no. 85
4. **Note:** Lyrics given without highlights are as per Ref. 1. The wordings given in yellow highlights are as per Ref. 2. Wordings in Ref. 3 are similar to Ref. 2. The wordings in Ref. 1 and Ref. 2 are slightly different. There are more number of stanzas in Ref. 1.
5. **Note:** Singer has followed lyrics as in Ref. 2.

| | |
|---|---|
| ರಾಗ: ವರಾಳಿ ತಾಳ: ಅಟ | ರಾಗ: ಮೋಹನ ತಾಳ: ಆದಿ |
| | |
| ಅಕ್ಕ ನಂದಗೋಪನ ಅರಮನೆಯೊಳಗೊಬ್ಬ | ಅಕ್ಕ ನಂದಗೋಪನ ಅರಮನೆಯೊಳಗೊಬ್ಬ |
| ಅಕ್ರೂರ ಬಂದನಂತೆ ॥ ಪ ॥ | ಅಕ್ರೂರ ಬಂದನಂತೆ |
| ಹೊಕ್ಕು ಬಳಕೆಯಿಲ್ಲ ಹೊಸಬನು ಇವನಂತೆ | ಹೊಕ್ಕು ಬಳಸುವಳಲ್ಲ ಹುಸಿಯನಾಡುವಳಲ್ಲ |
| ಇಕ್ಕೋ ಬಾಗಿಲ ಮುಂದೆ ಈಗ ರಥವ ಕಂಡೆ ॥ ಅಪ ॥ | ಅಕ್ಕೋ ಬಾಗಿಲ ಮುಂದೀಗ ರಥವ ಕಂಡೆ |
| | |
| ಮಧುರಾ ಪಟ್ಟಣವಂತೆ ಮಾವನ ಮನೆಯಂತೆ | ಮಥುರಾ ಪಟ್ಟಣವಂತೆ ಮಾವ ಕರೆಸಿದನಂತೆ |
| ನದಿಯ ದಾಟಲು ಬೇಕಂತೆ | ನದಿಯ ದಾಟಲುಬೇಕಂತೆ |
| ಎದುರು ಆರಿಲ್ಲವಂತೆ ಏನೆಂಬೆ ಏಣಾಕ್ಷಿ | ಬದಲು ಮಾತಿಲ್ಲವಂತೆ ಏನೆಂಬೆ ಏಣಾಕ್ಷಿ |
| ಉದಯದಿ ಪಯಣವಂತೆ ॥ ೧ ॥ | ಉದಯದಿ ಪಯಣವಂತೆ ಹೇ ಕಾಂತೆ |
| | |
| ಒಳ್ಳೆ ವೇಳೆಗಳಂತೆ ಬಿಲ್ಲು ಹಬ್ಬಗಳಂತೆ | ಮಲ್ಲರ ಕೂಟವಂತೆ ಮತ್ತ ಕಾಳಗವಂತೆ |
| ಎಲ್ಲಾ ಬೀದಿ ಸಿಂಗಾರವಂತೆ | ಬಲ್ಲಿದ ಗಜಗಳಂತೆ |
| ಮಲ್ಲರ ಕೂಟವಂತೆ ಮತ್ತ ಕಾಳಗವಂತೆ | ಬಿಲ್ಲ ಹಬ್ಬಗಳಂತೆ ಬೀದಿ ಶೃಂಗಾರವಂತೆ |
| ಅಲ್ಲೆ ತಾಯ್ತಂದೆಗಳ ಕಾಲಿಗೆ ನಿಗಳವಂತೆ ॥ ೨ ॥ | ಅಲ್ಲಿ ತಾಯಿ ತಂದೆರ ಕಾಲಿಗೆ ನಿಗಡವಂತೆ |
| | |
| ಮತ್ತ ಪಾಂಡವರಂತೆ ಮೋಹದ ಸೋದರರಂತೆ | ಅಲ್ಲೇ ಹುಟ್ಟಿದನಂತೆ ಅರಸಿನಳಿಯನಂತೆ |
| ಅತ್ತೆಯ ಮಕ್ಕಳಂತೆ | ಇಲ್ಲಿಗೆ ಬಂದನಂತೆ |
| ಸುತ್ತು ಶತ್ರುಗಳಂತೆ ಸಕಲ ಕಾರ್ಯಗಳಂತೆ | ಎಲ್ಲಾ ಕಪಟವಂತೆ ಎಲ್ಲೂ ಹೇಗಿಲ್ಲವಂತೆ |
| ಚಿತ್ತಜ-ನಯ್ಯನ ಚಿತ್ತ ಎರಡಾಯ್ತಂತೆ ॥ ೩ ॥ | ನಿಲ್ಲದೆ ಯಶೋದೆ ಕಣ್ಣಿಗೆ ನೀರಂತೆ |

| | |
|---|---|
| ಅಲ್ಲಿ ಪುಟ್ಟಿದನಂತೆ ಅರಸಿನಳಿಯನಂತೆ | ಮತ್ತೆ ಪಾಂಡವರಂತೆ ಮೋಹದ ಸೋದರ |
| ಇಲ್ಲಿಗೆ ಬಂದನಂತೆ | ಅತ್ತೆಯ ಮಕ್ಕಳಂತೆ |
| ಕಳ್ಳ ಕಪಟನಂತೆ ಎಂದಿಗೂ ಹೀಗಂತೆ | ಸುತ್ತು ಶತ್ರುಗಳಂತೆ ಸಕಲ ಕಾರ್ಯಗಳಂತೆ |
| ನಿಲ್ಲದೆ ಯಶೋದೆಗೆ ಕಣ್ಣ ನೀರಂತೆ ॥ ೪ ॥ | ಚಿತ್ತಜನಯ್ಯನ ಚಿತ್ತವೆರಡಾದವಂತೆ |
| | |
| ತಾಳಲಾರೆವು ನಾವು ಪುರಂದರ ವಿಠ್ಠಲನ | ತಾಳಲಾರೆವು ನಾವು ಪುರಂದರ ವಿಠಲನ |
| ಕಾಣದೆ ನಿಲಲಾರೆವೆ | ಬಾಲತನದಿಂದ ಭಾಳ ನಂಬಿದ್ದೆವಮ್ಮ |
| ಕಾಲದಲೊಂದಾಗಿ ಕಾಮಿನಿಯರು ಕೂಡಿ | ಕಾಲದಲಿ ಒಂದಾಗಿ ಕಾಮಿನಿ ಜನರೆಲ್ಲ |
| ಆಲಸ್ಯವಿಲ್ಲದೆ ಆಣೆಯಿಡುವ ಬನ್ನಿ ॥ ೫ ॥ | ಆಲೋಚನೆ ಮಾಡಿ ಆಣೆಯಿಡುವ ಬನ್ನಿ |

## ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ನಂದಗೋಕುಲದಲ್ಲಿ ಬೆಳೆಯುತ್ತಿದ್ದ ಕೃಷ್ಣನನ್ನು ಕೊಲ್ಲಿಸಬೇಕೆಂದು ಅವನ ಸೋದರಮಾವನೂ ಮಧುರೆಯ ಅರಸನೂ ಆಗಿದ್ದ ಕಂಸನು ಮಧುರೆಯಲ್ಲಿ ನಡೆಯುವ ಬಿಲ್ಲು ಹಬ್ಬವನ್ನು ನೆಪಮಾಡಿಕೊಂಡು ಉಪಾಯದಿಂದ ಕರೆತರಲು ತನ್ನ ಮಂತ್ರಿ ಅಕ್ರೂರನನ್ನು ಕಳುಹಿಸಿದನು. ಕೃಷ್ಣನ ವಿರಹವನ್ನು ತಾಳಲಾರದೆ ಗೋಕುಲದ ಗೋಪಿಯರ ಅಳಲು ಮುಂದಿನ ನಾಲ್ಕು ಪದಗಳ ವಸ್ತು.

**ನದಿ** – ಯಮುನಾ ನದಿ.

**ಏಣಾಕ್ಷಿ** – ಜಿಂಕೆಯ ಕಣ್ಣಂತೆ ಕಣ್ಣುಳ್ಳವಳು.

**ನಿಗಡ** – ಕಾಲಿಗೆ ಕಟ್ಟುವ ಸರಪಳಿ, ಬಂಧನ.

**ಅಲ್ಲಿ** – ಮಧುರೆಯಲ್ಲಿ.

**ಅರಸನಳಿಯ** – ಕಂಸನ ಸೋದರಳಿಯ.

**ಇಲ್ಲಿಗೆ** – ನಂದಗೋಕುಲಕ್ಕೆ.

**ಹೊಕ್ಕು ಬಳಕೆ** = ವಿಶೇಷ ಗುರುತು

**ನಿಗಳ** = ಬೇಡಿ

**ಅತ್ತೆಯ ಮಕ್ಕಳಂತೆ** = ಪಾಂಡವರು ಕೃಷ್ಣನ ಸೋದರತ್ತೆಯಾದ ಕುಂತಿಯ ಮಕ್ಕಳು. ಕುಂತಿ ಮತ್ತು ವಸುದೇವ ಒಂದೇ ಹೊಟ್ಟೆಯಲ್ಲಿ ಹುಟ್ಟಿದವರು.

**ಅಲ್ಲಿ** = ಮಧುರೆಯಲ್ಲಿ

**ಅರಸನ** = ಕಂಸನ

**ಕಳ್ಳ ಕಪಟ** = ಒಳಸಂಚು

**Classification:** Keerthane
**Ankita:** Purandara Vittala
**Location:** NA
**Category:** Krishna Leele
**Group Words:** Krishna, akrura, bagilu, kamsa, nadi, billu, habba, tayi, tande, pandava, kunti, kalla, mosa, kannu, yashode, gopi, gaja, huttu, shatru, makkalu,
**Pravachana:** NA
**Explanation:** NA